# ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು –560056

ಸಂಖ್ಯೆ: ಎಸಿಎ.4/ಸ್ನಾ.ಪ./2018–2019 ದಿನಾಂಕ: 06.07.2018

## ಸ್ನಾತಕೋತ್ತರ ಪದವಿ ಪ್ರವೇಶಾತಿ ಅಧಿಸೂಚನೆ

ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ ಆವರಣ, ಸ್ನಾತಕೋತ್ತರ ಕೇಂದ್ರ, ರಾಮನಗರ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ, ಈ ಕೆಳಕಂಡ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಕ್ಕೆ 2018–19ನೇ ಶೈಕ್ಷಣಿಕ ಸಾಲಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

**ಎ. ಜ್ಞಾನಭಾರತಿ ಆವರಣ:**

1) **ಕಲಾ ನಿಕಾಯ: ಎಂ.ಎ.** – ಅರ್ಥಶಾಸ್ತ್ರ ; ಆಂಗ್ಲ ; ಹಿಂದಿ ; ಇತಿಹಾಸ ; ಪತ್ರಿಕೋದ್ಯಮ ಮತ್ತು ಸಂವಹನ ; ಕನ್ನಡ ; ತತ್ವಶಾಸ್ತ್ರ ; ರಾಜ್ಯಶಾಸ್ತ್ರ ; ಗ್ರಾಮೀಣಾಭಿವೃದ್ಧಿ ಅಧ್ಯಯನ ; ಸಂಸ್ಕೃತ ; ಸಮಾಜಶಾಸ್ತ್ರ ; ತೆಲುಗು ; ಉರ್ದು ; ಮಹಿಳಾ ಅಧ್ಯಯನ ; ಪ್ರದರ್ಶನ ಕಲಾ :–ನೃತ್ಯ (ಭರತನಾಟ್ಯ) ; ನಾಟಕ ; ಸಂಗೀತ ; ಮೃದಂಗ ; ಸಮಾಜಕಾರ್ಯ (ಎಂ.ಎಸ್.ಡಬ್ಲ್ಯೂ); ಮತ್ತು ದೃಶ್ಯಕಲೆ.

2) **ವಿಜ್ಞಾನ ನಿಕಾಯ:** ಎಂ.ಎಸ್ಸಿ.– ಅನ್ವಯಿಕ ತಳಿಶಾಸ್ತ್ರ ; ಅನ್ವಯಿಕ ಭೂಗರ್ಭಶಾಸ್ತ್ರ ; ಜೀವರಸಾಯನಶಾಸ್ತ್ರ ; ಜೀವತಂತ್ರಜ್ಞಾನ ; ಸಸ್ಯಶಾಸ್ತ್ರ ; ರಸಾಯನಶಾಸ್ತ್ರ ; ಗಣಕ ವಿಜ್ಞಾನ ; ವಿದ್ಯುನ್ಮಾನ ಮಾಧ್ಯಮ ; ವಿದ್ಯುನ್ಮಾನ ವಿಜ್ಞಾನ ; ಪರಿಸರ ವಿಜ್ಞಾನ ; ಫ್ಯಾಷನ್ ಅಂಡ್ ಅಪೆರಲ್ ಡಿಸೈನ್ ; ಭೂಗೋಳಶಾಸ್ತ್ರ ; ಭೌಗೋಳಿಕ ಮಾಹಿತಿ ವಿಜ್ಞಾನ (ಸ್ವಂತ ಹಣಕಾಸು ವೆಚ್ಚ); ಯೋಗ ವಿಜ್ಞಾನ ; ಜೀವ ವಿಜ್ಞಾನ ; ಗಣಿತ ಶಾಸ್ತ್ರ ; ಅಣುಜೀವ ವಿಜ್ಞಾನ ; ಸೂಕ್ಷ್ಮಜೀವಶಾಸ್ತ್ರ ; ಭೌತಶಾಸ್ತ್ರ ; ಮನಃಶಾಸ್ತ್ರ ; ಸೈಕಾಲಾಜಿಕಲ್ ಕೌನ್ಸಲಿಂಗ್ ; ಸಂಖ್ಯಾಶಾಸ್ತ್ರ ; ಪ್ರಾಣಿಶಾಸ್ತ್ರ ; ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ (ಎಂ.ಎಲ್.ಐ.ಎಸ್.); (ಮೊದಲ ಎರಡು ಸೆಮಿಸ್ಟರ್‌ಗಳನ್ನು ಪೂರೈಸಿಸದ ನಂತರ ಬಯಸಿದಲ್ಲಿ ಸ್ನಾತಕ ಪದವಿಯೊಂದಿಗೆ ನಿರ್ಗಮಿಸಬಹುದು).

3) **ವಾಣಿಜ್ಯ ನಿಕಾಯ:** ಎಂ.ಕಾಂ.

4) **ಶಿಕ್ಷಣ ನಿಕಾಯ:** ಎಂ.ಎಡ್ ; ಬಿ.ಪಿ.ಎಡ್ ; ಎಂ.ಪಿ.ಎಡ್.

5) **ಕಾನೂನು ನಿಕಾಯ:** ಎಲ್ಎಲ್.ಎಂ. ಹೆಚ್ಚಿನ ವಿವರಗಳಿಗೆ ಕಾನೂನು ಕಾಲೇಜು ಪ್ರಾಂಶುಪಾಲರನ್ನು ಸಂಪರ್ಕಿಸಬಹುದು ದೂರವಾಣಿ ಸಂಖ್ಯೆ: (Ph:080-22961172/22961171) ಅಂತರ ಜಾಲ ವಿಳಾಸ www.ulcbangalore.com

**ಬಿ. ರಾಮನಗರ ಸ್ನಾತಕೋತ್ತರ ಕೇಂದ್ರದಲ್ಲಿ ಒದಗಿಸಲಾಗುವ ವಿಷಯಗಳು:** ಎಂ.ಎ.–ಅರ್ಥಶಾಸ್ತ್ರ ; ಎಂ.ಕಾಂ.

**ಸಿ. ವಿಶ್ವವಿದ್ಯಾಲಯದಿಂದ ಸಂಯೋಜನೆಗೊಂಡ 46 ಸ್ನಾತಕೋತ್ತರ ಕಾಲೇಜುಗಳಲ್ಲಿ ಬೋಧಿಸುವ ವಿಷಯಗಳ ಬಗ್ಗೆ ಬೆಂಗಳೂರು ವಿಶ್ವವಿದ್ಯಾಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ನೋಡಬಹುದು.**

**ಅರ್ಜಿಯನ್ನು ಸಲ್ಲಿಸಲು ಮಾರ್ಗಸೂಚಿಗಳು:**

- ಪ್ರತಿಯೊಂದು ಸ್ನಾತಕೋತ್ತರ ಕೋರ್ಸಿಗೆ ಪ್ರತ್ಯೇಕ ಅರ್ಜಿ ಸಲ್ಲಿಸಬೇಕು.
- ಅರ್ಜಿ ನಮೂನೆ ಮತ್ತು ಅರ್ಹತೆ, ಸೀಟ್ ಮ್ಯಾಟ್ರಿಕ್ಸ್ ಮತ್ತು ಕೋರ್ಸುಗಳ ಶುಲ್ಕದ ಮಾಹಿತಿಗಳನ್ನು ಬೆಂಗಳೂರು ವಿಶ್ವವಿದ್ಯಾಲಯದ ಅಂತರಜಾಲ **www.bangaloreuniversity.ac.in** ನಲ್ಲಿ ನೋಡಬಹುದು.
- **ಅರ್ಜಿ ಶುಲ್ಕ:** ಸಾಮಾನ್ಯ ವರ್ಗದ ಅಭ್ಯರ್ಥಿಗಳು ರೂ.200/– ಮತ್ತು ಪರಿಶಿಷ್ಟ ಜಾತಿ/ಪಂಗಡ ಹಾಗೂ ಪ್ರವರ್ಗ–1 ಅಭ್ಯರ್ಥಿಗಳು ರೂ.100/–ಗಳನ್ನು ಆನ್‌ಲೈನ್ ಮುಖಾಂತರ ಸಂದಾಯ ಮಾಡ ಬೇಕು ಮೂಲ ಶುಲ್ಕದ ರಸೀಧಿಯನ್ನು ಭರ್ತಿ ಮಾಡಿದ ಅರ್ಜಿಯ ಜೊತೆ ಲಗತ್ತಿಸಬೇಕು.
- ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಭರ್ತಿ ಮಾಡಬೇಕು ದಿನಾಂಕ 09.07.2018 ರಿಂದ ಆನ್‌ಲೈನ್ ಪೋರ್ಟಲ್ ತೆರೆದಿರುತ್ತದೆ.
- ಅಪೂರ್ಣ ಅರ್ಜಿಗಳನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುದು (ಸೂಕ್ತ ದಾಖಲಾತಿಗಳು ಹಾಗೂ ಪ್ರಮಾಣ ಪತ್ರಗಳನ್ನು ಲಗತ್ತಿಸದ ಅರ್ಜಿಗಳನ್ನು).

- ಆನ್‌ಲೈನ್ ಮುಖಾಂತರ ಭರ್ತಿ ಮಾಡಿದ ಅರ್ಜಿಗಳ ಜೊತೆ ಸೀಟುಗಳ ಕೋರಿಕೆಗೆ ಬೇಕಾಗಿರುವ ಪೂರಕ ದಾಖಲೆಗಳನ್ನು ಲಗತ್ತಿಸಿರಬೇಕ ಆನ್‌ಲೈನ್ ಮುಖಾಂತರ ಅರ್ಜಿಸಲ್ಲಿಸುವ ಅಭ್ಯರ್ಥಿಗಳು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಆಯಾ ವಿಭಾಗದ ಮುಖ್ಯಸ್ಥರ ವಿಳಾಸಕ್ಕೆ ಅರ್ಜಿಗಳನ್ನು ಕಳುಹಿಸುವುದು.
- ಭರ್ತಿ ಮಾಡಿದ ಅರ್ಜಿಗಳನ್ನು ಕಳುಹಿಸ ಬೇಕಾಗಿರುವ ವಿಭಾಗಗಳ ವಿಳಾಸವನ್ನು ಬೆಂಗಳೂರು ವಿಶ್ವವಿದ್ಯಾಲಯದ ವೆಬ್‌ಸೈಟ್‌ಯಿಂದ ಪಡೆಯಬಹುದು.
- ಭರ್ತಿ ಮಾಡಿದ ಅರ್ಜಿಗಳನ್ನು ನಿಗದಿ ಪಡಿಸಿದ ಕೊನೆಯ ದಿನಾಂಕದ ನಂತರ ಸಲ್ಲಿಸುವ ಅಥವಾ ತಲುಪುವ ಅರ್ಜಿಗಳನ್ನು ಯಾವುದೇ ಮಾಹಿತಿ ನೀಡದೇ ಸಾರಸಗಟಾಗಿ ತಿರಸ್ಕರಿಸಲಾಗುವುದು.
- ರಾಮನಗರ ಸ್ನಾತಕೋತ್ತರ ಕೇಂದ್ರಗಳಲ್ಲಿ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಲ್ಲಿ ನಡೆಸುವ ಸ್ನಾತಕೋತ್ತರ ಕೋರ್ಸುಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಜ್ಞಾನ ಭಾರತಿ ಆವರಣದಲ್ಲಿಯೇ ಬೆಂಗಳೂರು ವಿಶ್ವವಿದ್ಯಾಲಯದ ಆಯಾಯ ವಿಷಯಗಳ ವಿಭಾಗಗಳ ಮುಖ್ಯಸ್ಥರಿಗೆ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ.
- ಎಂ.ಎಸ್ಸಿ. ಆಡಿಯೋಲಜಿ ಅಂಡ್ ಸ್ಪೀಚ್ ಲಾಂಗ್ವೇಜ್ ಪೆಥೋಲಜಿ ಕೋರ್ಸುಗಳಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಡೀನರು, ವಿಜ್ಞಾನ ನಿಕಾಯ, ಗಣಿತಶಾಸ್ತ್ರ ವಿಭಾಗ, ಜ್ಞಾನ ಭಾರತಿ ಆವರಣ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು–560056 ರವರಿಗೆ ಸಲ್ಲಿಸಲು ಕೋರಿದೆ.
- ಮೇಲಿನ ವಿಷಯಗಳಿಗೆ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿಗಾಗಿ ಆಯಾಯ ವಿಭಾಗದ ಮುಖ್ಯಸ್ಥರನ್ನು ಸಂಪರ್ಕಿಸಬಹುದು.
- ಅಭ್ಯರ್ಥಿಗಳು ಅರ್ಜಿಗಳನ್ನು ತುಂಬುವ ಮೊದಲು, ಅರ್ಹತಾ ನಿಯಮ ನಿಬಂಧನೆಗಳು ಶುಲ್ಕಪಾವತಿಯ ಸ್ವರೂಪ ಮೊದಲಾದ ನಿರ್ದೇಶನಗಳಿಗಾಗಿ ಬೆಂಗಳೂರು ವಿಶ್ವವಿದ್ಯಾಲಯದ ಅಂತರ ಜಾಲ **www.bangaloreuniversity.ac.in** ಗೆ ಭೇಟಿ ನೀಡಲು ಸೂಚಿಸಲಾಗಿದೆ. ಅರ್ಜಿ ನಮೂನೆ ಅಂತರ ಜಾಲದಲ್ಲಿ ಲಭ್ಯವಿದೆ.
- ಅರ್ಜಿಯನ್ನು ತುಂಬುವ ಮೊದಲು ಬೆಂಗಳೂರು ವಿಶ್ವವಿದ್ಯಾಲಯದ ಅಂತರ ಜಾಲಕ್ಕೆ ಅಧಿಕೃತ e-mail ಗುರುತಿನೊಂದಿಗೆ ಲಾಗ್‌ಇನ್ ಆಗಬೇಗಾಗಿರುತ್ತದೆ. ಆದ್ದರಿಂದ ಅರ್ಜಿ ತುಂಬುವ ಮೊದಲು ಅಭ್ಯರ್ಥಿಗಳೆಲ್ಲರು ವೈಯಕ್ತಿಕ ಇ–ಮೇಲೆಅನ್ನು ಸೃಷ್ಟಿಸಿಕೊಂಡು ಅರ್ಜಿ ತುಂಬುವ ಪ್ರಕ್ರಿಯೆಯನ್ನು ಆರಂಭಿಸಲು ಸೂಚಿಸಲಾಗಿದೆ.

| ಅರ್ಜಿಗಳನ್ನು ವಿತರಿಸುವ, ಅರ್ಜಿಗಳನ್ನು ಸಲ್ಲಿಸುವ ಹಾಗೂ ಪ್ರವೇಶ ಪ್ರಕ್ರಿಯೆಯ ದಿನಾಂಕಗಳು: | |
|---|---|
| ಅ) ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸುವ ದಿನಾಂಕ | 09.07.2018 from 10am |
| ಆ) ದಂಡ ಶುಲ್ಕವಿಲ್ಲದೆ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ | 20.07.2018 upto 6pm |
| ಇ) ರೂ. 200/– ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 25.07.2018 upto 5pm |
| ಈ) ಆಯಾ ವಿಭಾಗಕ್ಕೆ ಅರ್ಜಿಗಳನ್ನು (Hard copy) ಸಲ್ಲಿಸಲು ಕೊನೆಯ ದಿನಾಂಕ | 26.07.2018 upto 4pm |
| ಉ) ಜೇಷ್ಠತಾ ಪಟ್ಟಿ ಪ್ರಕಟಿಸುವ ದಿನಾಂಕ | 28.07.2018 |
| ಊ) ಜೇಷ್ಠತಾ ಪಟ್ಟಿಯಲ್ಲಿನ ದೋಷಗಳ ಬಗ್ಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 30.07.2018 |
| ಋ) ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸುವ ದಿನಾಂಕ | 01.08.2018 |
| ೠ) ವಿಜ್ಞಾನ ವಿಷಯಗಳಿಗೆ ಪ್ರವೇಶ ಪ್ರಕ್ರಿಯೆ ದಿನಾಂಕಗಳು | 03.08.2018& 07.08.2018 |
| ಎ) ವಾಣಿಜ್ಯ ವಿಷಯಗಳಿಗೆ ಪ್ರವೇಶ ಪ್ರಕ್ರಿಯೆ ದಿನಾಂಕಗಳು | 04.08.2018& 08.08.2018 |
| ಏ) ಕಲಾ, ಮತ್ತು ಶಿಕ್ಷಣ ವಿಭಾಗಗಳಿಗೆ ಪ್ರವೇಶ ಪ್ರಕ್ರಿಯೆ ದಿನಾಂಕಗಳು | 06.08.2018& 09.08.2018 |
| ಒ) ಪ್ರಥಮ ಸೆಮಿಸ್ಟರ್ ತರಗತಿಗಳು ಪ್ರಾರಂಭವಾಗುವ ದಿನಾಂಕ | 10.08.2018 |

**ಆದೇಶದ ಮೇರೆಗೆ,**

ಕುಲಸಚಿವರು 6/7/2018

ಗೆ,

1. ಡೀನ್ ಕಲಾ/ವಾಣಿಜ್ಯ/ವಿಜ್ಞಾನ/ಶಿಕ್ಷಣ/ಕಾನೂನು ನಿಕಾಯಗಳು, ಬೆಂಗಳೂರು ವಿಶ್ವವಿದ್ಯಾಲಯ,ಬೆಂಗಳೂರು.
2. ಎಲ್ಲಾ ವಿಭಾಗದ ಅಧ್ಯಕ್ಷರುಗಳು/ಸಂಯೋಜನಾಧಿಕಾರಿಗಳು, ಜ್ಞಾನಭಾರತಿ ಆವರಣ ಮತ್ತು ಸ್ನಾತಕೋತ್ತರ ಕೇಂದ್ರ ರಾಮನಗರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
3. ಪ್ರಾಂಶುಪಾಲರು, ಕಾನೂನು ಕಾಲೇಜು ಮತ್ತು ದೈಹಿಕ ಶಿಕ್ಷಣ ಕಾಲೇಜು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
4. ಪ್ರಾಂಶುಪಾಲರುಗಳು, ಸಂಯೋಜಿತ ಕಾಲೇಜುಗಳು (ಸ್ನಾತಕೋತ್ತರ) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
5. ನಿರ್ದೇಶಕರು, ಯೋಜನೆ ಮತ್ತು ಮೇಲ್ವಿಚಾರಣೆ ಮತ್ತು ನಿರ್ದೇಶಕರು, ಅಂಚೆ–ತೆರಮ/ಪ್ರಸಾರಾಂಗ/ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
6. ಕಾರ್ಯದರ್ಶಿಗಳು/ಕುಲಪತಿಗಳು/ಕುಲಸಚಿವರು/ಕುಲಸಚಿವರು (ಮೌಲ್ಯಮಾಪನ) ಮತ್ತು ಆಪ್ತ ಸಹಾಯಕರು ವಿತ್ತಾಧಿಕಾರಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
7. ಸೂಕ್ತ ಕ್ರಮಕ್ಕೆ ಸಿಸ್ಟಂ ಅನಲಿಸ್ಟ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
8. ಕಛೇರಿ ಪ್ರತಿ.